**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.14/2022**

**ಚಾಸಾ-6/ಪಿಡಬ್ಲೂ -1**

| | |
|---|---|
| **ಹೆಸರು** | ಮುರಳಿಧರ |
| **ತಂದೆ ಹೆಸರು** | ಸದಾನಂದರಾವ ಹಂಚಾಟೆ |
| **ವಯಸ್ಸು** | 55-ವರ್ಷಗಳು |
| **ಉದ್ಯೋಗ** | ಎಇಇ |
| **ವಾಸ ಸ್ಥಳ** | ಬೆಂಗಳೂರ |

**ಸಾಕ್ಷಿಯನ್ನ ದಿನಾಂಕ 17.10.2023 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

ಅಗಷ್ಟ-2019 ರಿಂದ ಮೇ-2022 ನಾನು ಎಇಇ ಆಗಿ ಪಿಡಬ್ಲುಡಿ ಇಲಾಖೆ ಜೇವರ್ಗಿಯಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ 13.05.2021 ರಂದು ನೆಲೋಗಿ ಪೋಲಿಸರ ಕೋರಿಕೆ ಮೇರೆಗೆ ಯಾತನೂರ ಸೀಮಾಂತರದ ಜಮೀನು ಸರ್ವೆ ನಂ.322/8 ರಲ್ಲಿ ಅಕ್ರಮವಾಗಿ ಮರಳು ಸಂಗ್ರಹಣ ಮಾಡಿದ್ದರ ಬಗ್ಗೆ ಮೌಲ್ಯಮಾಪನ ಮಾಡಲು ಹೋಗಿರುತ್ತೇನೆ. ಸದರಿ ಮರಳು 250 ಟನ್ ಇದ್ದು ಅದರ ಮೌಲ್ಯ ರೂ.1,96,500/- ಇರುತ್ತದೆ. ಆ ಬಗ್ಗೆ ದಿನಾಂಕ 17.05.2021 ರಂದು ಮೌಲ್ಯಮಾಪನ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಈಗ ನಾನು ಸದರಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ದಿನಾಂಕ 13.07.2021 ರಂದು ನೆಲೋಗಿ ಪೋಲಿಸರು ನನಗೆ ಪತ್ರ ಬರೆದಿರುತ್ತಾರೆ. ಅದೆ ದಿನ ನಾನು ಮರಳು ಮಾಲ್ಯಮಾಪನ ಮಾಡಲು ಹೋಗಿರುತ್ತೇನೆ. ದಿನಾಂಕ 13.07.2021 ನ್ನು ಹೊರತುಪಡಿಸಿ ಸದರಿ ಸ್ಥಳಕ್ಕೆ ನಾನು ಹೋಗಿರುವುದಿಲ್ಲ. ಸರ್ವೆ ನಂ.322/8 ಜಮೀನು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಪೋಲಿಸರು ತೋರಿಸಿದ ಪ್ರಕಾರ ನಾನು ಮೌಲ್ಯಮಾಪನ ಮಾಡಿ ವರದಿ ಸಲ್ಲಿಸಿರುತ್ತೇನೆ. ನಾನು ಯಾವ ದಿನಾಂಕದಂದು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ ಮತ್ತು ಯಾವ ದಿನಾಂಕದಂದು ಮೌಲ್ಯಮಾಪನ ಮಾಡಿ ವರದಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲದಿದ್ದರೂ ಪೋಲಿಸರ ಕೋರಿಕೆ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರ ಕೋರಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ